ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

ಸಿಸಿ - 1237/2016

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸೋಮಶೇಖರ | ಪಿಡಬ್ಲ್ಯೂ 5 |
| ತಂದೆಯ ಹೆಸರು | - | ಬಸವೇಗೌಡ | ಪಿಡಬ್ಲ್ಯೂ 5 |
| ವಯಸ್ಸು | - | 42 ವರ್ಷ | |
| ಕೆಲಸ | - | ಗುತ್ತಿಗೆದಾರರು | ಸಾ.ಪ್ರ.ಬೋ |
| ವಾಸ | - | ಮಿರ್ಲೆ | ದಿ. 16.07.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಸಾಕ್ಷಿ ನಿಪಿ2 ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಸಾಕ್ಷಿ ಸಹಿಯನ್ನು ನಿಪಿ2 ಬಿ ಎಂದು ಗುರ್ತಿಸಲಾಯಿತು. ಒಂದು ವರ್ಷದ ಹಿಂದೆ ನಮ್ಮ ಗ್ರಾಮಕ್ಕೆ ಸಾಲಿಗ್ರಾಮ ಪೊಲೀಸರು ಗಲಾಟೆಯ ವಿಚಾರವಾಗಿ ಪಂಚನಾಮೆ ಮಾಡಲು ಬಂದಿದ್ದರು. ಮಿರ್ಲೆ ಮುಖ್ಯರಸ್ತೆಯಲ್ಲಿ ಆಸ್ಪತ್ರೆಯಿಂದ ಕೆಳಗಡೆ ಪಂಚನಾಮೆಯನ್ನು ಬರೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ಪೊಲೀಸರಿಗೆ ಯಾರು ಸ್ಥಳ ತೋರಿಸಿದರು ಎಂದರೆ ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಮುಮಾ 1 ಮತ್ತು 2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

ಈ ಹಂತದಲ್ಲಿ ಶ್ರೀ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ

2) ದಿನಾಂಕಃ 20-04-2016 ರಂದು ನಮ್ಮ ಗ್ರಾಮಕ್ಕೆ ಚಾಸಾ 1 ಮತ್ತು ಆರೋಪಿಗೆ ಗಲಾಟೆಯಾಗಿತ್ತು, ಅದರ ಸಲುವಾಗಿ ಪಂಚನಾಮೆ ಮಾಡಲು ಬಂದಿದ್ದರು ಎಂದರೆ ನಿಜ. ಆಗ ಚಾಸಾ 1 ಪೊಲೀಸರಿಗೆ ಸ್ಥ..ಳ ತೋರಿಸಿದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ಮುಮಾ 1 ಮತ್ತು 2 ರಿಂದ ಆರೋಪಿ ನನಗೆ ಹೊಡೆದು ಗಾಯಪಡಿಸಿದರು ಎಂದು ಪೊಲೀಸರಿಗೆ ಹೇಳಿಕೆ

ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಪೊಲೀಸರು ಮುಮಾ 1 ಮತ್ತು 2 ನ್ನು ವಶಪಡಿಸಿಕೊಂಡು ವಿವರವಾಗಿ ನಿಪಿ2 ರಂತೆ ಪಂಚನಾಮೆ ಬರೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ನಿಜ. ನಿಪಿ2 ರಲ್ಲಿ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> <u>ಆರೋಪಿ ಪರ ಶ್ರೀ ಟಿ ಜಿ ವಕೀಲರಿಂದ</u> -

ಮಿರ್ಲೆ ಮುಖ್ಯ ರಸ್ತೆಯಲ್ಲಿ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ ಎಂದರೆ ನಿಜ. ಮುಮಾ 1 ಮತ್ತು 2 ನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರಿಗೆ ಪರಿಚಯ ಇದ್ದ ಕಾರಣ ನಿಪಿ2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

## <u>ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ</u>

**<u>ಸಿಸಿ - 1237/2016</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಹೇಂದ್ರ | ಪಿಡಬ್ಲ್ಯೂ 4 |
| ತಂದೆಯ ಹೆಸರು | - | ಚಂದ್ರಶೇಖರ | ಪಿಡಬ್ಲ್ಯೂ 4 |
| ವಯಸ್ಸು | - | 35 ವರ್ಷ | |
| ಕೆಲಸ | - | ವ್ಯವಸಾಯ | ಸಾ.ಪ್ರ.ಬೋ |
| ವಾಸ | - | ಮಿರ್ಲೆ | ದಿ. 16.07.2019 |

<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>

1) ಚಾಸಾ 1, 2 ಮತ್ತು ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಎರಡು ವರ್ಷದ ಹಿಂದೆ ಆರೋಪಿ ಮತ್ತು ಚಾಸಾ 1 ರವರ ನಡುವೆ ಸಂಜೆ ಸಮಯ ಜಗಳ ಆಗುತ್ತಿತ್ತು. ಆರೋಪಿ ಚಾಸಾ 1 ರವರಿಗೆ ಹಗ್ಗದಿಂದ ಹೊಡೆಯುತ್ತಿದ್ದ, ಮಚ್ಚು ಅಲ್ಲಿಯೇ ಇತ್ತು. ಆರೋಪಿ ಚಾಸಾ 1 ರವರಿಗೆ ಬೋಳಿಮಗನೆ, ನಿನ್ನಮ್ಮನ್ ನನ್ನ ಮಾತು ಕೇಳೊದಿಲ್ಲಾ ಎಂದು ಬೈಯುತ್ತಿದ್ದ. ನಾನು ಜಗಳ ಬಿಡಿಸಿ ಚಾಸಾ 1 ರವರಿಗೆ ಗಾಯವಾದ ಕಾರಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನ್ಯಾಯಾಲಯದ ಮುಂದಿರುವ ಮುಮಾ1 ಮತ್ತು 2 ನ್ನು ನೋಡಿ ಸಾಕ್ಷಿ ಗುರ್ತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರ್ತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಟಿ ಜಿ ವಕೀಲರಿಂದ</u>

2) ಗಲಾಟೆಯನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆಯನ್ನು ಖುದ್ದಾಗಿ ನೋಡಿರುತ್ತೇನೆ ಮತ್ತು ನನ್ನ ಮುಂದೆ ಹೊಡೆದರು ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಆರೋಪಿ ಚಾಸಾ 1 ರವರನ್ನು ಬೈದುಕೊಂಡು ಹೋಗುತ್ತಿದ್ದ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ1 ಎಂದು ಗುರ್ತಿಸಲಾಯಿತು. ಗಲಾಟೆಯಾದ ಮೇಲೆ ನಾನು ಸಂಜಯ್ ಮನೆಗೆ ಹೋಗಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಿಲ್ಲ ಎಂದರೆ ಸರಿಯಲ್ಲ. ಗಿರೀಶ್ ರವರ ತಾಯಿ ಜೇನನಹಳ್ಳಿ ಕೆ ಆರ್ ಪೇಟೆ ತಾಲ್ಲೂಕು ಎಂದರೆ ನಿಜ. ದಿವ್ಯ ಎನ್ನುವವರ ತಾಯಿ ಸಹ ಜೇನನಹಳ್ಳಿಯವರು ಎಂದರೆ ನನಗೆ

ಗೊತ್ತಿಲ್ಲ. ಚಾಸಾ 1 ದಿವ್ಯ ಎಂಬ ಹುಡುಗಿಗೆ ಮದುವೆಯಾಗು ಎಂದು ಹಿಂಸೆ ನೀಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ದಿವ್ಯ ರವರ ಎಂಗೇಜ್ ಮೆಂಟ್ ಆಗಿದ್ದರೂ ಸಹ ಚಾಡಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಮತ್ತು ಚಾಸಾ 2 ಗಿರೀಶ್ ಗೆ ಸಪೋರ್ಟ್ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಈ ಸಂಬಂದವಾಗಿ ದಿವ್ಯ ರವರು ನನ್ನ, ಮತ್ತು ಚಾಸಾ 1, 2 ರವರ ವಿರುದ್ಧ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಮುಮಾ 1 ಮತ್ತು 2 ನ್ನು ಪೊಲೀಸರಿಗೆ ನಾನು ಮತ್ತು ಇನ್ನೊಬ್ಬರು ನೀಡಿರುತ್ತೇವೆ. ಮುಮಾ 1 ಮತ್ತು 2 ರ ಮೇಲೆ ಚೀಟಿ ಅಂಟಿಸಿ ನಮ್ಮ ರುಜು ಪಡೆದಿರುವುದಿಲ್ಲ. ಮಹಜರ್ ಗೆ ನನ್ನ ಸಹಿಯನ್ನು ಪಡೆದಿರುವುದಿಲ್ಲ. ಮುಮಾ 2 ಮಚ್ಚಲ್ಲ ಕುಡುಗೋಲು ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ 1 ರವರ ನಡುವೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅವಾಚ್ಯ ಶಬ್ದಗಳಿಂದ ಚಾಸಾ 1 ರವರನ್ನು ನಿಂದಿಸಿಲ್ಲ ಎಂದರೆಸರಿಯಲ್ಲ. ಆರೋಪಿ ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

## ಪ್ರಧಾನ ಸಿವಿಲ್ ಜಡ್ಜ್ ವತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ - 1237/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿನಯ್ | ಸಿಡಬ್ಲ್ಯೂ 3 |
| ತಂದೆಯ ಹೆಸರು | - | ಪರಮೇಶ್ | ಪಿಡಬ್ಲ್ಯೂ 3 |
| ವಯಸ್ಸು | - | 29 ವರ್ಷ | |
| ಕೆಲಸ | - | ವ್ಯವಸಾಯ | ಸಾ.ಪ್ರ.ಬೋ |
| ವಾಸ | - | ಮಿರ್ಲೆ | ದಿ. 16.07.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಚಾಸಾ 1, 2 ಮತ್ತು ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ನನ್ನ ಸಮಕ್ಷಮ ಆರೋಪಿ ಮತ್ತು ಚಾಸಾ 1 ಮತ್ತು 2 ರವರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ನನ್ನ ಸಮಕ್ಷಮ ಯಾರು ಯಾರಿಗೂ ಹೊಡೆದಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಹೋಗಿ ಜಗಳ ಬಿಡಿಸಿರುವುದಿಲ್ಲ. ಮುಮಾ 1 ಮತ್ತು 2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಪೊಲೀಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಶ್ರೀ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ

2) ದಿನಾಂಕಃ 19-04-2016 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಸಂಜಯ್ ಜೊತೆ ಮಾತನಾಡಲು ಮನೆಯ ಹತ್ತಿರ ಹೋಗಿದ್ದೆ ಎಂದರೆ ಸರಿಯಲ್ಲ. ಆಗ ಸಂಜಯ್ ಮನೆಯಲ್ಲಿ ಚಾಸಾ 1 ಮತ್ತು 2 ಮಾತನಾಡುತ್ತಾ ಕುಳಿತಿದ್ದರು ನಾನು ಮಾತನಾಡುತ್ತಾ ಕುಳಿತುಕೊಂಡೆ ಎಂದರೆ ಸರಿಯಲ್ಲ. ಆಗ ನ್ಯಾಯಾಲಯದ ಮುಂದಿರುವ ಆರೋಪಿ ಚಾಸಾ 1 ರವರ ಮನೆಗೆ ಅಕ್ರಮ ಪ್ರವೇಶ ಮಾಡಿ ಬೋಳಿಮಗನೆ ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ರವರು ಏಕೆ ನನ್ನನ್ನು ಬೈಯುತ್ತಿದ್ದೀರಿ ಎಂದು ಕೇಳಿದಾಗ ಆರೋಪಿ ತನ್ನ ಕೈಯಲ್ಲಿದ್ದ ಹಗ್ಗದಿಂದ ಚಾಸಾ 1 ರವರ ಮುಖಕ್ಕೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಚಾಸಾ 1 ರವರ ಮನೆಯಲ್ಲಿದ್ದ ಮಚ್ಚನ್ನು

ತೆಗೆದುಕೊಂಡು, ಸದರಿ ಮಚ್ಚಿನ ಹಿಂಬದಿಯಲ್ಲಿ ಚಾಸಾ 1 ರವರ ಎಡಗಾಲಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಸಂಜಯ್ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಆರೋಪಿ ಮಚ್ಚು ಮತ್ತು ಹಗ್ಗವನ್ನು ಅಲ್ಲಿಯೇ ಬಿಸಾಡಿ, ಪೊಲೀಸರಿಗೆ ದೂರು ನೀಡಿದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಮುಮಾ 1 ಮತ್ತು 2 ರಿಂದ ಆರೋಪಿ ಚಾಸಾ 1 ಮತ್ತು 2 ರವರಿಗೆ ಹೊಡೆದು ನೋವುಂಟು ಮಾಡಿದರುಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ದಿನಾಂಕಃ 20-04-2016 ರಂದು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ3 ಎಂದು ಗುರ್ತಿಸಲಾಯಿತು. ಘಟನೆಯನ್ನು ಪ್ರತ್ಯಕ್ಷ ನೋಡಿದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> - ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ